# Vijaya Karnataka

**Date:** August 19, 2015 **Page No.** 02

**Edition:** Mysore **Language: Kannada**

# ಐಎಎಸ್ ಅಧಿಕಾರಿಗಳಾಗುವ ಗುರಿಹೊಂದಿ

## ಎಸ್‌ಡಿಎಂ ಐಎಂಡಿ ಸಂಸ್ಥಾಪನಾ ದಿನಾಚರಣೆಯಲ್ಲಿ ವಿವೇಕ್ ಕುಲಕರ್ಣಿ ಸಲಹೆ

**ವಿಕ ಸುದ್ದಿಲೋಕ,** ಮೈಸೂರು

ಚಿಕ್ಕ ವಯಸ್ಸಿನಲ್ಲಿಯೇ, ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ದೊಡ್ಡ ಸರಕಾರಿ ಹುದ್ದೆ ಅಲಂಕರಿಸುವ ಮಹತ್ವಾಕಾಂಕ್ಷೆ ಹೊಂದುವಂತೆ ಬ್ರಿಕ್‌ವರ್ಕ್ ರೇಟಿಂಗ್ಸ್ ಕಂಪೆನಿ ಸಂಸ್ಥಾಪಕ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ವಿವೇಕ್ ಕುಲಕರ್ಣಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಹಯೋಗದಲ್ಲಿ ಮಂಗಳವಾರ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

''ಖಾಸಗಿ ವಲಯದಲ್ಲಿ ಹೆಚ್ಚು ವೇತನ ಪಡೆಯುವ ಹಲವು ಹುದ್ದೆಗಳನ್ನು ಪಡೆಯಬಹುದು. ಆದರೆ ಭಾರತೀಯ ನಾಗರಿಕ ಸೇವೆ ಹುದ್ದೆಗಳನ್ನು ಪಡೆದು ಸೇವೆ ಮಾಡುವುದು ವಿಶೇಷ ಅನುಭವ ನೀಡುತ್ತದೆ. ಖಾಸಗಿ ವಲಯದಲ್ಲಿ ಉದ್ಯೋಗ ಭದ್ರತೆ ಇರುವುದಿಲ್ಲ, ಆದರೆ ಸರಕಾರಿ ವಲಯದಲ್ಲಿ ಒಮ್ಮೆ ಉದ್ಯೋಗ ಪಡೆದ ನಂತರ ಉದ್ಯೋಗದಿಂದ ತೆಗೆದುಹಾಕುವ ಸಾಧ್ಯತೆ ಕಡಿಮೆ. ಹೆಚ್ಚೆಂದರೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡಲಾಗುತ್ತದೆ. ಅಲ್ಲದೆ ಈ ಉನ್ನತ ಹುದ್ದೆಗಳಲ್ಲಿದ್ದುಕೊಂಡು ನಾವು ಮಾಡುವ ಸಾರ್ವಜನಿಕ ಕೆಲಸಗಳನ್ನು ಜನರು ಸ್ಮರಿಸುತ್ತಾರೆ. ವಿಶೇಷ ಅಧಿಕಾರ, ಸೌಲಭ್ಯಗಳನ್ನು ಅನುಭವಿಸಬಹುದು. ವಿದೇಶ ಪ್ರಯಾಣಕ್ಕೆ ತೆರಳುವ ಅವಕಾಶಗಳು ದೊರೆಯಲಿವೆ. ಹಿಂದೆ ನಾನು ಅಧಿಕಾರಿಯಾಗಿದ್ದಾಗ ಮಾಡಿದ ಕೆಲಸವನ್ನು ಜನರು ಇಂದಿಗೂ ಸ್ಮರಿಸುತ್ತಾರೆ. ಆದ್ದರಿಂದ ಖಾಸಗಿ ಹುದ್ದೆಗಳಿಗಿಂತ ಐಎಎಸ್‌ನಂತಹ ಸರಕಾರಿ ಹುದ್ದೆಗಳನ್ನು ಪಡೆಯಲು ಶ್ರಮವಹಿಸಬೇಕೆಂದು'' ಸಲಹೆ ನೀಡಿದರು.

''ಆರ್ಥಿಕ ವಲಯದಲ್ಲಿಯೂ ಉತ್ತಮ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಿದ್ದು, ಸ್ವಲ್ಪ ಶ್ರಮವಹಿಸಿದರೆ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ಬ್ಯಾಕಿಂಗ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅವಕಾಶವಿದೆ. ಇದನ್ನು ವಿದ್ಯಾರ್ಥಿಗಳು ಬಳಕೆ ಮಾಡಿಕೊಳ್ಳಬೇಕೆಂದು'' ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಉಪ ನಿರ್ದೇಶಕಿ ಡಾ.ಎಚ್. ಗಾಯತ್ರಿ, ಪ್ರಾಧ್ಯಾಪಕ ಡಾ.ಎಂ.ಆರ್. ಸುರೇಶ್ ಹಾಗೂ ಇತರರು ಇದ್ದರು.

ವಿಕ ಚಿತ್ರಲೋಕ



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಹಯೋಗದಲ್ಲಿ ಮಂಗಳವಾರ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿವೇಕ್ ಕುಲಕರ್ಣಿ ಮಾತನಾಡಿದರು.